**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.</u>**

**ಅಸಲು ದಾವಾ ಸಂಖ್ಯೆ. 173/2020**

**ವಾ.ಸಾ-1**

**<u>ಸಾಕ್ಷಿಗೆ ದಿನಾಂಕಃ 10-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ.ಜೆ.ಕೆ.ಆರ್ ವಾದಿಯರ ಪರ ವಕೀಲರಿಂದಃ</u>**

1. ನನ್ನ ತಂದೆಯು ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

2. ನನ್ನ ತಾತನ ಹೆಸರು ತಿಮ್ಮರಾಯಿಗೌಡ. ಸದರಿ ನನ್ನ ತಾತ ಯಾವಾಗ ತೀರಿಕೊಂಡರು ಎಂದರೆ ನಾನು ಆಗ ಜನಿಸಿರಲಿಲ್ಲ ಎಂದು ನುಡಿಯುವರು. ಸದರಿ ನನ್ನ ತಾತ ತೀರಿಕೊಂಡಿರುವ ಬಗ್ಗೆ ಮರಣ ಪ್ರಮಾಣ ಪತ್ರ ಇಲ್ಲ.

3. ದಾವಾ ಆಸ್ತಿಗಳು ನನ್ನ ತಾತನ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ತಾತನಿಗೆ ಇಬ್ಬರು ಹೆಂಡತಿಯರು. ಸದರಿಯವರ ಪೈಕಿ ಮೊದಲನೇಯವರು ಪುಟ್ಟನಂಜಮ್ಮ ಮತ್ತು ಎರಡನೇಯವರು ನಂಜಮ್ಮ. ಸದರಿಯವರ ಪೈಕಿ ಮೊದಲನೇ ಹೆಂಡತಿಯಾದ ಪುಟ್ಟನಂಜಮ್ಮರವರಿಗೆ ಯಾವುದೇ ಮಕ್ಕಳು ಇರಲಿಲ್ಲ. ನನ್ನ ತಂದೆಯು ನನ್ನ ತಾತನ ಎರಡನೇ ಹೆಂಡತಿಯ ಮಗ.

4. ದಾವಾ ಸ್ವತ್ತುಗಳನ್ನು ನನ್ನ ತಾತನ ಎರಡನೇ ಹೆಂಡತಿಯು ಪ್ರತಿವಾದಿಯರಿಗೆ ದಾನಪತ್ರ ಮಾಡಿದ್ದಾರೆ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**